## ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 104 (107) |
| ಸದಸ್ಯರ ಹೆಸರು | : | ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 27.01.2026 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ಸಂಖ್ಯೆ ಎಷ್ಟು; ಅವು ಯಾವವು; | ರಾಜ್ಯದಲ್ಲಿ ಒಟ್ಟು 33 ನಗರಾಭಿವೃದ್ಧಿ ಪ್ರಾಧಿಕಾರಗಳಿರುತ್ತವೆ.<br><br>ನಗರಾಭಿವೃದ್ಧಿ ಪ್ರಾಧಿಕಾರಗಳ ವಿವರಗಳನ್ನು **ಅನುಬಂಧ**ದಲ್ಲಿರಿಸಿದೆ. |
| ಆ. | ಕಳೆದ 5 ವರ್ಷಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಿರ್ಮಾಣ ಮಾಡಲು ಎಷ್ಟು ಎಕರೆ ಜಾಗಗಳನ್ನು ಭೂ – ಸ್ವಾಧೀನ ಮಾಡಿಕೊಳ್ಳಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳು Right to fair compensation and Transparency in land acquisition, rehabilitation and resettlement act, 2013 ರ ಅವಕಾಶದಂತೆ ಅಭಿವೃದ್ಧಿ ಯೋಜನೆಗಳಿಗೆ ಬೇಕಾಗುವ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳುವ ಬದಲಾಗಿ, ರೈತರ ಸಹಭಾಗಿತ್ವದೊಂದಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಭೂ ಸ್ವಾಧೀನಪಡಿಸಿಕೊಂಡಿರುವುದಕ್ಕೆ ಪರಿಹಾರಗಳ ಬದಲಿಗೆ ನಿವೇಶನಗಳ ಹಂಚಿಕೆ) ನಿಯಮಗಳು, 2009 ರಲ್ಲಿನ ಅವಕಾಶದಂತೆ ವ್ಯಾಪಕವಾಗಿ ಶೇ. 50:50 ರ ಅನುಪಾತದಡಿಯಲ್ಲಿ ಬಡಾವಣೆ ನಿರ್ಮಿಸಲು ಕ್ರಮವಹಿಸುತ್ತಿರುತ್ತವೆ.<br><br>ಅಭಿವೃದ್ಧಿ ಯೋಜನೆಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರಗಳು ಶೇ 50:50 ರ ಅನುಪಾತದಡಿ ಪಡೆದಿರುವ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತದೆ. |

| ನಗರಾಭಿವೃದ್ಧಿ ಪ್ರಾಧಿಕಾರಗಳ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) |
|---|---|
| ಬಳ್ಳಾರಿ | 101.98 |
| ಬೀದರ್ | 32.07 |

<table>
<tr><td></td><td></td><td><table>
<tr><td>ಬೆಳಗಾವಿ</td><td>130.00</td></tr>
<tr><td>ಚಾಮರಾಜನಗರ-ರಾಮಸಮುದ್ರ</td><td>14.60</td></tr>
<tr><td>ಚಿಕ್ಕಮಗಳೂರು</td><td>208.92</td></tr>
<tr><td>ಗದಗ-ಬೆಟಗೇರಿ</td><td>18.47</td></tr>
<tr><td>ಹಾಸನ</td><td>1142.00</td></tr>
<tr><td>ಹೊಸಪೇಟೆ</td><td>24.52</td></tr>
<tr><td>ಕಲಬುರಗಿ</td><td>116.93</td></tr>
<tr><td>ಕೆ.ಜಿ.ಎಫ್</td><td>26.00</td></tr>
<tr><td>ಕೊಪ್ಪಳ</td><td>4.00</td></tr>
</table></td></tr>
<tr><td>ಇ.</td><td>ಭೂ ಸ್ವಾಧೀನ ಮಾಡಿಕೊಂಡ ನಂತರ ಬಡಾವಣೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿ ಪಡಿಸಲಾಗಿದೆಯೇ; ಅಭಿವೃದ್ಧಿಗೊಂಡ ಬಡಾವಣೆಗಳನ್ನು ಹಂಚಿಕೆ ಮಾಡಲು ಇರುವ ಮಾನದಂಡಗಳಾವುವು</td><td>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರಲ್ಲಿನ ಅವಕಾಶಗಳಂತೆ ಪ್ರಾಧಿಕಾರದಿಂದ ರಚಿಸಲಾಗುವ ಬಡಾವಣೆಗಳಲ್ಲಿನ ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮಗಳು, 1991 ರಲ್ಲಿನ ಅವಕಾಶಗಳಂತೆ ಸಾರ್ವಜನಿಕರಿಗೆ ಹಂಚಿಕೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುವುದು.<br><br>• ನಿಯಮ 3 ರನ್ವಯ ಪ್ರಾಧಿಕಾರವು ಅಭಿವೃದ್ಧಿಪಡಿಸುವ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳ ವಿವರಗಳೊಂದಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಮತ್ತು ಇತರೆ ಮಾಹಿತಿಗಳನ್ನು ಒಳಗೊಂಡಂತೆ ನಗರದಲ್ಲಿ ವ್ಯಾಪಕ ಪ್ರಸಾರದಲ್ಲಿರುವ ದೈನಂದಿನ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ, ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ.<br><br>• ನಿಯಮ 12 ರಂತೆ ನಿವೇಶನ ಪಡೆಯಲು ಇಚ್ಛಿಸುವ ಅರ್ಜಿದಾರರು ಕರ್ನಾಟಕದಲ್ಲಿ ಕನಿಷ್ಠ 5 ವರ್ಷಗಳ ಕಾಲ (ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಿಕಟ ಪೂರ್ವದಲ್ಲಿ) ವಾಸವಿರಬೇಕಿರುತ್ತದೆ ಹಾಗೂ ಅರ್ಜಿದಾರರು ಅಥವಾ ಅವರ ಕುಟುಂಬದ ಸದಸ್ಯರು ರಾಜ್ಯದ ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರ ಅಥವಾ ಗೃಹ ಮಂಡಳಿಯಿಂದ ಈ ಹಿಂದೆ ನಿವೇಶನ ಅಥವಾ ಮನೆಯನ್ನು ಪಡೆದಿರಬಾರದು.</td></tr>
</table>

| | | |
|---|---|---|
| | | • ಆಯಾಯಾ ಪ್ರಾಧಿಕಾರಗಳಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ನಿಯಮ-13 ರಡಿ ನಿಗದಿಪಡಿಸಿರುವ ಆಯ್ಕೆ ನೀತಿಯನ್ನು ಪರಿಶೀಲಿಸಿ, ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ.<br>• ನಿಯಮ 13 (2) ರಲ್ಲಿ ನಮೂದಿಸಿರುವಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಮಾಜಿ ಸೈನಿಕರು, ಕೇಂದ್ರ/ರಾಜ್ಯ ಸರ್ಕಾರಿ ನೌಕರರು, ಅಂಗವಿಕಲರು ಹಾಗೂ ಸಾರ್ವಜನಿಕ ವರ್ಗ ಸೇರಿದಂತೆ ನಿಯಮಾನುಸಾರ ನಿಗದಿಪಡಿಸಲಾದ ಮೀಸಲಾತಿ ಅನ್ವಯ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ.<br>• ನಿವೇಶನ ಹಂಚಿಕೆಯಾದ ನಂತರ, ಫಲಾನುಭವಿಯು ನಿಯಮ 19(1) ರಂತೆ ನಿಗದಿತ ಮೌಲ್ಯವನ್ನು ಪ್ರಾಧಿಕಾರಕ್ಕೆ ಪಾವತಿಸಬೇಕಾಗುತ್ತದೆ.<br>• ತದನಂತರ, ಪ್ರಾಧಿಕಾರ ಮತ್ತು ಹಂಚಿಕೆದಾರರ ನಡುವೆ ನಿಯಮ 19(1) ರ ಅಡಿಯಲ್ಲಿ 10 ವರ್ಷದ 'ಗುತ್ತಿಗೆ-ಹಾಗೂ-ಮಾರಾಟ (Lease-cum-Sale-Deed) ಒಪ್ಪಂದ'ವನ್ನು ನೋಂದಾಯಿಸಲಾಗುವುದು.<br>• ನಿಯಮ 19(7) ರಡಿ 10 ವರ್ಷದ ಗುತ್ತಿಗೆ ಅವಧಿಯು ಪೂರ್ಣಗೊಂಡ ನಂತರ ಒಪ್ಪಂದದ ಷರತ್ತುಗಳ ಉಲ್ಲಂಘನೆಯಾಗದೇ ಇರುವ ಬಗ್ಗೆ ಖಚಿತಪಡಿಸಿಕೊಂಡು ಅರ್ಜಿದಾರರಿಗೆ ಕ್ರಯಪತ್ರ (Sale Deed) ನೀಡಲಾಗುತ್ತದೆ. |
| ಈ. | ಕಳೆದ 2 ವರ್ಷಗಳಲ್ಲಿ ಅಭಿವೃದ್ಧಿಗೊಂಡ ಬಡಾವಣೆಗಳ ನಿವೇಶನಗಳನ್ನು ಹಂಚಿಕೆ ಮಾಡಲು ಎಷ್ಟು ಅರ್ಜಿಗಳನ್ನು ಆಹ್ವಾನಿಸಲಾಗಿದೆ; ಸ್ವೀಕೃತಗೊಂಡ ಅರ್ಜಿಗಳ ಪೈಕಿ ಎಷ್ಟು ಅರ್ಜಿಗಳಿಗೆ ನಿವೇಶನ ನೀಡಲಾಗಿದೆ? | ಪ್ರಾಧಿಕಾರದಿಂದ ರಚಿಸಲಾಗುವ ಬಡಾವಣೆಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ ನಿಯಮಾನುಸಾರ ಅರ್ಹ ಅರ್ಜಿದಾರರಿಗೆ ನಿವೇಶನ ನೀಡಲು ಕ್ರಮವಹಿಸಲಾಗುವುದು. |

ಕಡತ ಸಂಖ್ಯೆ: ನಅಇ 22 ಬೆಮಪ್ರಾ 2026 (ಇ)

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

## ಅನುಬಂಧ-1

# ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳು
## (ಬಿ.ಡಿ.ಎ. ಮತ್ತು ಬಿ.ಎಂ.ಆರ್.ಡಿ.ಎ. ವ್ಯಾಪ್ತಿ ಹೊರತುಪಡಿಸಿ)

| ಕ್ರ.ಸಂ. | ನಗರಾಭಿವೃದ್ಧಿ ಪ್ರಾಧಿಕಾರಗಳು |
|---|---|
| 1. | ಬಾಗಲಕೋಟೆ |
| 2. | ಬೆಳಗಾವಿ |
| 3. | ಬಳ್ಳಾರಿ |
| 4. | ಬೀದರ್ |
| 5. | ವಿಜಯಪುರ |
| 6. | ಚಾಮರಾಜನಗರ-ರಾಮಸಮುದ್ರ |
| 7. | ಚಿಕ್ಕಮಗಳೂರು |
| 8. | ಚಿತ್ರದುರ್ಗ |
| 9. | ಚಿಕ್ಕಬಳ್ಳಾಪುರ |
| 10. | ದಾವಣಗೆರೆ-ಹರಿಹರ |
| 11. | ಗದಗ-ಬೆಟಗೇರಿ |
| 12. | ಕಲಬುರಗಿ |
| 13. | ಹಾಸನ |
| 14. | ಹಾವೇರಿ |
| 15. | ಹೊಸಪೇಟೆ |
| 16. | ಹುಬ್ಬಳ್ಳಿ-ಧಾರವಾಡ |
| 17. | ಕಾರವಾರ |
| 18. | ಕೆ.ಜಿ.ಎಫ್. |
| 19. | ಕೋಲಾರ |
| 20. | ಕೊಪ್ಪಳ |
| 21. | ಮಡಿಕೇರಿ |
| 22. | ಮಂಡ್ಯ |
| 23. | ಮಂಗಳೂರು |
| 24. | ಮೈಸೂರು |
| 25. | ರಾಯಚೂರು |
| 26. | ಶಿವಮೊಗ್ಗ |
| 27. | ತುಮಕೂರು |
| 28. | ಉಡುಪಿ-ಮಲ್ಪೆ |
| 29. | ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ತೋರಣಗಲ್ಲು |
| 30. | ಯಾದಗಿರಿ |
| 31. | ಶಿರಾ |
| 32. | ಸಿಂಧನೂರು |
| 33. | ರಾಣೇಬೆನ್ನೂರು |